**C.C No: 57/2021** **P.W:1**

ದಿನಾಂಕ : 26.05.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀಸವಾಲು ಶ್ರೀ. ಜಿ.ಜಿ. ವಕೀಲರಿಂದಃ-</u>

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ ಎಂದರೆ ಹೌದು. ನಾನು ಪದವಿದರನಾಗಿರುತ್ತೇನೆ. ನನಗೆ ಆರೋಪಿಯು 4 ವರ್ಷದಿಂದ ಪರಿಚಯಸ್ಥ. ಆರೋಪಿಯು ಹೌಸಿಂಗ್ ಬೋರ್ಡ್‌ನಲ್ಲಿ ಇದ್ದಂತಹ ಲಕ್ಷ್ಮಮ್ಮ ಎಂಬುವವರ ಮನೆಗೆ ಬರುತ್ತಿದ್ದರು, ಆಗ ನನಗೆ ಪರಿಚಯವಿರುತ್ತಾರೆ. ಲಕ್ಷ್ಮಮ್ಮನವರು ಚೀಟಿ ವ್ಯವಹಾರವನ್ನು ಮಾಡುತ್ತಿರಲಿಲ್ಲ. ಆರೋಪಿ ಹೊಳೆನರಸೀಪುರದವರಾಗಿರುತ್ತಾರೆ. ಆರೋಪಿಯು ಹೊಳೆನರಸೀಪುರ ನಿವಾಸಿ ಎಂದು ನೋಟಿಸ್ ಅನ್ನು ನೀಡಿರುವುದಿಲ್ಲ. ಆರೋಪಿಯ ಹೆಂಡತಿ ಹೆಸರು ನನಗೆ ಗೊತ್ತಿರುವುದಿಲ್ಲ. ಆರೋಪಿಯು ಕುಟುಂಬ ಪರಿಚಯಸ್ಥರಾಗಿರುವುದಿಲ್ಲ. ನೋಟಿಸ್ ಅನ್ನು ವಕೀಲರೆ ಬರೆಸಿರುತ್ತಾರೆ. ನೋಟಿಸ್‌ನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿರುತ್ತದೆ. ನನ್ನ ನೋಟಿಸ್‌ನಲ್ಲಿ ಆರೋಪಿಯು ನನಗೆ ಕುಟುಂಬ ಪರಿಚಯಸ್ಥರೆಂದು ನಾನು ಹೇಳಿ ಬರೆಸಿರುತ್ತೇನೆ. ಆರೋಪಿಯು ನನಗೆ ಕುಟುಂಬ ಪರಿಚಯಸ್ಥರಲ್ಲ ಎಂಬುದು ಸರಿಯಾಗಿರುತ್ತದೆ.

ಆರೋಪಿಗೆ ಎಷ್ಟು ಜನ ಮಕ್ಕಳೆಂದು ನನಗೆ ಗೊತ್ತಿರುವುದಿಲ್ಲ. ದಿನಾಂಕ : 20.10.2020 ರಂದು ಆರೋಪಿಯು ಹಣ ಬೇಕೆಂದು ನನ್ನನ್ನು ಕೇಳಿರುತ್ತಾರೆ. ನಾನು ಆರೋಪಿಗೆ ದಿನಾಂಕ : 23.10.2020 ರಂದು ಹಣ ನೀಡಿರುತ್ತೇನೆ. ಆರೋಪಿಯು ದಿನಾಂಕ : 23.10.2020 ರಂದು ಹಣ ತೆಗೆದುಕೊಂಡು ಹೋಗಲು ಸಂಜೆ 6 ಗಂಟೆಗೆ ಹೊಳೆನರಸೀಪುರಕ್ಕೆ ಬಂದಿರುತ್ತಾರೆ. ವ್ಯವಹಾರವು ಲಕ್ಷ್ಮಮ್ಮನವರ ಮನೆಯಲ್ಲಿ ನಡೆದಿರುತ್ತದೆ.

ನನ್ನ ತಿಳುವಳಿಕೆ ಪತ್ರದಲ್ಲಾಗಲೀ ಅಥವಾ ಪಿರ್ಯಾದಿನಲ್ಲಾಗಲೀ ಸದರಿ ವಿಚಾರವನ್ನು ತಿಳಿಸಿರುವುದಿಲ್ಲ. ಹಣ ನೀಡುವಾಗ ಲಕ್ಷ್ಮಮ್ಮ ಇದ್ದರು. ನನಗೆ ಸೇರಿದಂತಹ ಚಪ್ಪಲಿ ವ್ಯಪಾರದ ಅಂಗಡಿ, ಫ್ಯಾನ್ಸಿ ಸ್ಟೋರ್ ಹಾಗೂ ನನ್ನ ಹೆಂಡತಿಗೆ ಸೇರಿದಂತಹ ಬ್ಯೂಟಿ ಪಾರ್ಲರ್ ಇರುತ್ತದೆ. ನನಗೆ ಪ್ರತಿದಿನ ೩ - 4 ಸಾವಿರ ಆದಾಯ ಇರುತ್ತದೆ. ಎಸ್.ಬಿ.ಐ. ಬ್ಯಾಂಕಿನಲ್ಲಿ ನನಗೆ ಸೇರಿದಂತಹ ಖಾತೆ ಇರುತ್ತದೆ.

ವ್ಯವಹಾರವನ್ನು ಪ್ರತಿದಿನ ಬ್ಯಾಂಕಿನ ಮೂಲಕ ಮಾಡುವುದಿಲ್ಲ. ನನಗೆ ಪ್ರತಿದಿನ ಒಂದು ಸಾವಿರ ಲಾಭ ಸಿಗುತ್ತದೆ. ವಾರ್ಷಿಕವಾಗಿ 4 ಲಕ್ಷ ಆದಾಯ ಇರುತ್ತದೆ. ಹಳ್ಳಿಮೈಸೂರು ನನ್ನ ಸ್ವಂತ ಗ್ರಾಮ. ನಾನು ಬಿ.ಪಿ.ಎಲ್. ಕಾರ್ಡ್ ಅನ್ನು ಹೊಂದಿರುತ್ತಾರೆ. ವಾರ್ಷಿಕವಾಗಿ 1,82,000/- ರೂ ಆದಾಯದಿಂದ ಒಳಗೆ ಇರುವಂತಹ ವ್ಯಕ್ತಿಗಳಿಗೆ ಮಾತ್ರ ಬಿಪಿ.ಎಲ್. ಕಾರ್ಡ್ ನೀಡಲಾಗುತ್ತದೆ ಎಂಬ ವಿಚಾರ ನನಗೆ ಗೊತ್ತಿರುವುದಿಲ್ಲ. ವಾರ್ಷಿಕವಾಗಿ 4 ಲಕ್ಷ ಆದಾಯ ಇರುವ ಬಗ್ಗೆ ನಾನು ಆದಾಯ ತೆರಿಗೆ ಪಾವತಿ ಮಾಡಿರುವುದಿಲ್ಲ. ಫ್ಯಾನ್ಸಿ ಸ್ಟೋರ್ ಇರುವ ಬಗ್ಗೆ ದಾಖಲಾತಿಯನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ಲೈಸೆನ್ಸ್ ಹಾಜರುಪಡಿಸಿರುವುದಾಗಿ ಉತ್ತರಿಸುತ್ತಾರೆ. ದಿನಾಂಕ : 20.10.2020 ರಿಂದ 23.10.2020 ರವರೆಗೆ ನನ್ನ ಖಾತೆಯಲ್ಲಿ 1,180.03 ರೂ ಇತ್ತು ಎಂದರೆ ಹೌದು. 500 ರೂ ಮುಖಬೆಲೆಯ 4 ಬಂಡಲ್‌ಗಳನ್ನು ಆರೋಪಿಗೆ ನೀಡಿರುತ್ತೇನೆ. ಒಂದು ಬಂಡಲ್‌ನಲ್ಲಿ 100 ನೋಟ್‌ಗಳು ಇದ್ದವು. ಆರೋಪಿಯು ಹಣ ಪಡೆಯುವ ಕಾಲಕ್ಕೆ ನನಗೆ ಚೆಕ್ ಅನ್ನು ನೀಡಿರುತ್ತಾರೆ.

ಆರೋಪಿಯು ಮೊದಲೇ ಚೆಕ್ ಅನ್ನು ಬರೆದುಕೊಂಡುಬಂದಿದ್ದರು. ಸಹಿಯನ್ನು ಮೊದಲೇ ಬರೆದುಕೊಂಡು ಬಂದಿದ್ದರು. ಆಕಾಶ ನೀಲಿ ಬಣ್ಣದ ಎಸ್.ಬಿ.ಐ. ಬ್ಯಾಂಕಿನ ಚೆಕ್ ಅನ್ನು ನೀಡಿರುತ್ತಾರೆ. ಚೆಕ್ ಅನ್ನು ಕನ್ನಡ ಬಾಷೆಯಲ್ಲಿ ಬರೆದಿದ್ದರು. ಚೆಕ್‌ನ ಮೇಲೆ ೨ ಸಹಿಯನ್ನು ಹಾಕಿದ್ದರು. ಸಹಿ ಮಾಡಿರುವ ಶಾಹಿಗೂ ಬರವಣಿಗೆ ಇರುವ ಶಾಹಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸಾಕ್ಷಿಯು ಪೆನ್ನು ಬೇರೆ ಇರಬಹುದು ಎಂದು ಉತ್ತರಿಸುತ್ತಾರೆ. ಅದೇ

ರೀತಿಯಾಗಿ ಚೆಕ್‌ನಲ್ಲಿ 2 ಎಂದು ಬರೆದಿರುವ ವಿಚಾರ ತಿದ್ದಲಾಗಿದೆ ಎಂದರೆ ಹೌದು. ವಕೀಲರ ಕಚೇರಿಯಲ್ಲಿ ಎಷ್ಟು ಸಹಿ ಮಾಡಿರುತ್ತೇನೆ ಎಂದು ನನಗೆ ನೆನಪಿಲ್ಲ. ಯಾವ ವಿಳಾಸಕ್ಕೆ ನೋಟಿಸ್ ನೀಡಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನೋಟಿಸ್ ಕೊಡುವ ಪೂರ್ವದಲ್ಲಿ ನಾನು ಆರೋಪಿಯನ್ನು ಹಾಸನದ ಆಕಾಶವಾಣಿಯಲ್ಲಿ ಬೇಟಿಯಾಗಿದ್ದೆ. ಹಾಸನದಲ್ಲಿ ಆಕಾಶವಾಣಿ ಯಾವ ರಸ್ತೆಯಲ್ಲಿ ಇರುತ್ತದೆ ಎಂದು ನನಗೆ ನೆನಪಿಲ್ಲ. ನಿಪಿ 4 ರಲ್ಲಿ ವಿದ್ಯಾನಗರ ಹಾಸನ ಎಂದು ಬರೆಯಾಗಿರುತ್ತದೆ ಎಂದರೆ ಹೌದು. ಆಕಾಶವಾಣಿಗೆ ಹೋದಾಗ ಸಮಯ 5.30 ಆಗಿತ್ತು. ಆರೋಪಿಯು ಆಗ ಹೊರಗಡೆ ಇದ್ದರು.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಅಮರ್ ವಿ.ಎಲ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿರವರು ಹೊಳೆನರಸೀಪುರ

**_ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ_**

**ನ್ಯಾಯಾಲಯ, ಹೊಳೆನರಸೀಪುರ**

ಫ್ರಾಸ –9

**CC No: 299/2021** ಚಾಸ- 3

| | |
|---|---|
| ಹೆಸರು | ಅಣ್ಣಯ್ಯಪ್ಪ |
| ತಂದೆ/ಗಂಡನ ಹೆಸರು | ಬಸಪ್ಪ |
| ವಯಸ್ಸು | 89 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಚೌಡಸಮುದ್ರ ಗ್ರಾಮ ಹೊಳೆನರಸೀಪುರ ತಾಲೂಕು. |

ದಿನಾಂಕಃ 26.05.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಸ.ಸ.ಅ ರವರಿಂದಃ-

ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಗೊತ್ತಿರುತ್ತಾರೆ. ದಿನಾಂಕ : 06.01.2021 ರಂದು ಬೆಳಿಗ್ಗೆ 6.30 ರ ಸಮಯದಲ್ಲಿ ರಾಗಿಹಳ್ಳಿ ಕಾವಲು ಬಳಿ ಹೊಡೆದಾಟವಾಗಿರುತ್ತದೆ. ಜಮೀನಿನ ವಿಚಾರವಾಗಿ ಆರೋಪಿತರು ಚಾಸಾ 2 ರವರನ್ನು ಕಾಲಿನಿಂದ ಒದ್ದು ಕೆಳಗೆ ಬಿಳಿಸಿದ್ದರು. ಸದರಿ ವಿಚಾರವನ್ನು ಚಾಸಾ 4 ರವರು ನನಗೆ ತಿಳಿಸಿರುತ್ತಾರೆ. ನಾನು ಸ್ಥಳಕ್ಕೆ ಬಂದು ನೋಡಿದಾಗ ಚಾಸಾ 2 ರವರು ಅವರ ಮನೆ ಬಾಗಿಲಿಲ್ಲಿ ಬಿದ್ದು ಹೋಗಿದ್ದರು. ಅವರಿಗೆ ಬಲಭಾಗದ ಸೊಂಟದ ಮೂಳೆ ಮುರಿದುಹೋಗಿತ್ತು, ಮೇಲೆ ಏಳುವ ಸ್ಥಿತಿಯಲ್ಲಿ ಇರಲಿಲ್ಲ. ಹೊಳೆನರಸೀಪುರಕ್ಕೆ ಕರೆದುಕೊಂಡು ಬರುವಂತೆ ನಾನು ಹೊಳೆನರಸೀಪುರಕ್ಕೆ ಬಂದಿರುತ್ತೇನೆ. ಚಾಸಾ 2 ರವರನ್ನು ಆಂಬುಲೆನ್ಸ್‌ನಲ್ಲಿ ಹೊಳೆನರಸೀಪುರಕ್ಕೆ ಕರೆದುಕೊಂಡು ಬಂದಿರುತ್ತಾರೆ. ವೈದ್ಯರು ಪರೀಕ್ಷೆ ಮಾಡಿ ಇಲ್ಲಿ ಆಗುವುದಿಲ್ಲ ಹಾಸನಕ್ಕೆ ಕರೆದುಕೊಂಡು ಹೋಗಿ ಹೇಳಿರುತ್ತಾರೆ. ಆರೋಪಿತರು ಹಾಗೂ ಚಾಸಾ 1 ರವರಿಗೆ ಯಾವಾಗಲೂ ಕಲಹ ಇರುತ್ತದೆ. ನಮಗೆ ನ್ಯಾಯ ಹೇಳಿ ಸಾಕಾಗಿರುತ್ತದೆ ಎಂದು ಉತ್ತರಿಸುತ್ತಾರೆ. ಪೊಲೀಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ. ಇಟ್ಟಿಗೆಯಲ್ಲಿ ಹೊಡೆದು ಕಾಲಿನಿಂದ ಒದ್ದು, ಕೆಳಗೆ ಬೀಳಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಇಟ್ಟಿಗೆಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಇದನ್ನು ಹೊರತುಪಡಿಸಿ ನನಗೆ ಯಾವ ವಿಚಾರ

ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)

**ಪಾಟೀಸವಾಲು ಸ.ಸ.ಅಭಿಯೋಜಕರಿಂದಃ**

ಆರೋಪಿತರು ಚಾಸಾ 1 & 2 ರವರಿಗೆ ಕೈಗಳಿಂದ ಹೊಡೆದಿರುತ್ತಾರೆ ಎಂದರೆ ನಾನು ನೋಡಿರುವುದಿಲ್ಲ. ಅದೇ ರೀತಿಯಾಗಿ ಕೈಗಳಿಂದ ಎಳೆದುಕೊಂಡು ಬಂದು ಮೈಕೈಗೆ ತುಳಿದು ನೋವನ್ನು ಉಂಟು ಮಾಡಿರುವ ವಿಚಾರ ನಾನು ನೋಡಿರುವುದಿಲ್ಲ. ಆರೋಪಿತರು ಅವಾಚ್ಯ ಶಬ್ದಳಿಂದ ಬೈದಿರುವುದನ್ನು ನಾನು ಕೇಳಿಸಿಕೊಂಡಿರುವುದಿಲ್ಲ. ಆರೋಪಿತರು ಚಾಸಾ 1 & 2 ರವರ ಮನೆ ಬಾಗಿಲಿಗೆ ಇಟ್ಟಿಗೆ ಚೂರಿನಿಂದ ಹೊಡೆದು ನಷ್ಟವನ್ನು ಉಂಟು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಅದೇ ರೀತಿಯಾಗಿ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ನಾನು ಕೇಳಿಸಿಕೊಂಡಿರುವುದಿಲ್ಲ. ಆರೋಪಿತರು ಚಾಸಾ 2 ರವರನ್ನು ಮುಂದೆ ಹೋಗದಂತೆ ತಡೆದಿರುತ್ತಾರೆ ಎಂದರೆ ನಾನು ನೋಡಿರುವುದಿಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹಾ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು ಶ್ರೀ. ಎಸ್.ಬಿ.ಎಸ್. ವಕೀಲರಿಂದ :-**

ನಾನು ಚೌಡಸಮುದ್ರ ವಾಸಿ ಎಂದರೆ ಹೌದು. ರಾಗಿಹಳ್ಳಿ ಕಾವಲಿನಲ್ಲಿ ನನಗೆ 9 ಎಕರೆ ಜಮೀನು ಇರುತ್ತದೆ. ಅದರ ಸರ್ವೆ ನಂಬರ್ 1 ಆಗಿರುತ್ತದೆ. ನನ್ನ ಜಮೀನಿನ ಮೂರು ಜಮೀನುಗಳ ನಂತರ ಆರೋಪಿಗಳ ಜಮೀನು ಇರುತ್ತದೆ. ನನಗೆ ಕಣ್ಣು ಚೆನ್ನಾಗಿ ಕಾಣಿಸುತ್ತದೆ. ನಾನು ಬೆಳಿಗ್ಗೆ 6 ಗಂಟೆ ಏಳುತ್ತೇನೆ. ನನ್ನ ಮಗ ದ್ವಿ ಚಕ್ರ ವಾಹನದಲ್ಲಿ ಜಮೀನಿಗೆ ಕರೆದುಕೊಂಡು ಬರುತ್ತಾನೆ. ರಾಗಿಹಳ್ಳಿ ಕಾವಲಿನಲ್ಲಿ ನನಗೆ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ.

ಜಮೀನುಗಳು ಚೌಡ ಸಮುದ್ರ ಗ್ರಾಮದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಜಮೀನಿಗೂ ಸರೋಜಮ್ಮನ ಮನೆಗೂ ಮೂರು ಕಿಮೀ ದೂರವಾಗುತ್ತದೆ ಎಂದರೆ ಸರಿಯಲ್ಲ. ಚಾಸಾ 4 ರವರು ನನ್ನ ಜಮೀನಿನ ಬಳಿ ಬಂದಾಗ ಬೆಳಿಗ್ಗೆ 8 ಗಂಟೆ ಆಗಿತ್ತು. ಚಾಸಾ 4 ರವರು ಸಹಾ ಜಮೀನಿನ ಬಳಿ ಇದ್ದರು, ಊರಿನಲ್ಲಿ ಇರಲಿಲ್ಲ. ನಾನು ಸರೋಜಮ್ಮನ ಮನೆ ಬಳಿ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಾಗಣ್ಣ ಬಿದ್ದಿರಲಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮನೆ ಬಳಿ ಇಟ್ಟಿಗೆ ಚೂರು ಬಿದ್ದಿರಲಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಕುರಿತು ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ಸಹಾ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

ಓ. ಹೇ. ಕೇ. ಸ. ಇ. ಒ,

(ಅಮರ್ ವಿ.ಎಲ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿರವರು ಹೊಳೆನರಸೀಪುರ